# ರಾಷ್ಟ್ರೀಯ ಮುಕ್ತ ವಿದ್ಯಾಲಯ ಶಿಕ್ಷಣ ಸಂಸ್ಥೆ ( NIOS )

## ಪ್ರೌಢ ಶಿಕ್ಷಣ

## ಕನ್ನಡ – (208)

ಟಿ.ಎಂ.ಎ. ( **Tutor Marked Assignment** ) **ಅಂಕಗಳು: 20**

**I. ಯಾವುದಾದರೂ ಒಂದು ಪ್ರಶ್ನೆಯನ್ನು ಕುರಿತು 40– 60 ಶಬ್ದಗಳಲ್ಲಿ ಉತ್ತರಿಸಿ: ( 2 ಅಂಕ )**

1. ಭರತ ಭೂಮಿ ನನ್ನ ತಾಯಿ ಪದ್ಯದಲ್ಲಿ ಕವಿ ನಿವಾರಿಸಲು ಬಯಸಿರುವ ತೊಡಕುಗಳಾವುವು?

2. ಹುಯೆನ್‌ತ್ಸಾಂಗ್ ಇಂಡಿಯಾಗೆ ಬರಲು ಕಾರಣವೇನು?

**II. ಯಾವುದಾದರೂ ಒಂದು ಪ್ರಶ್ನೆಯನ್ನು ಕುರಿತು 40– 60 ಶಬ್ದಗಳಲ್ಲಿ ಉತ್ತರಿಸಿ: ( 2 ಅಂಕ )**

1. ಕೆರೆಯ ದಡದಲ್ಲಿ ಕಪ್ಪೆಯೊಂದು ಹಸಿವಿನಿಂದ ಪಾರಾದ ಬಗೆ ಹೇಗೆ?

2. ಸೀತೆ ಮಂಡೋದರಿಯನ್ನು ಏನೆಂದು ಹೊಗಳುತ್ತಾಳೆ?

**III. ಯಾವುದಾದರೂ ಒಂದು ಪ್ರಶ್ನೆಯನ್ನು ಕುರಿತು 40– 60 ಶಬ್ದಗಳಲ್ಲಿ ಉತ್ತರಿಸಿ: ( 2 ಅಂಕ)**

1. ಹಸಿವನ್ನು ಕುರಿತಂತೆ ಜೇಡರ ದಾಸಿಮಯ್ಯನ ನಿಲುವೇನು?

2. ಗಾಂಧೀಜಿಯ ಬಾಳು ಯಾರಿಗಾಗಿ ಮೀಸಲಾಗಿತ್ತು ?

**IV. ಯಾವುದಾದರೂ ಒಂದು ಪ್ರಶ್ನೆಯನ್ನು ಕುರಿತು 100– 150 ಶಬ್ದಗಳಲ್ಲಿ ಉತ್ತರಿಸಿ: ( 4 ಅಂಕ)**

1. ಭವಿಷ್ಯದ ಗೃಹ ಜೀವನಕ್ಕೆ ಕಂಪ್ಯೂಟರ್‌ನ ಕೊಡುಗೆಗಳೇನು?

2. 'ಶಿಸ್ತಿನ ಸಿಪಾಯಿ' ವಿಷಯದ ಬಗ್ಗೆ ವಾಕ್ಯವೃಂದ ರಚಿಸಿ

**V. ಯಾವುದಾದರೂ ಒಂದು ಪ್ರಶ್ನೆಯನ್ನು ಕುರಿತು 40– 60 ಶಬ್ದಗಳಲ್ಲಿ ಉತ್ತರಿಸಿ: ( 4 ಅಂಕ)**

1. ಕಪ್ಪೆಯಿಂದ ಪಿಚಕಾರಿ ಹೊಡೆಸಿಕೊಂಡ 'ಕಿವಿ'ಯ ಸ್ಥಿತಿ ಹೇಗಿತ್ತು?

2. ಚೀನಾ ದೇಶದ ಚಕ್ರವರ್ತಿ ಹುಯೆನ್‌ತ್ಸಾಂಗ್‌ನನ್ನು ಆದರದಿಂದ ಕಂಡ ಬಗೆ ತಿಳಿಸಿ.

**VI) ಯಾವುದಾದರೂ ಒಂದನ್ನು ಉತ್ತರಿಸಿ ( ಯೋಜನಾ ಕಾರ್ಯ – Project work) (6 ಅಂಕ)**

1. ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆಯ ಕುರಿತು ನಿಮ್ಮ ಗೆಳೆಯ/ಗೆಳತಿಗೊಂದು ಪತ್ರ ಬರೆಯಿರಿ.

2. ಕೊಟ್ಟಿರುವ ಕಥಾಂಶವನ್ನು ಸಂಕ್ಷಿಪ್ತ ರೂಪಕ್ಕೆ ಇಳಿಸಿ, ಸಾರಾಂಶವನ್ನು ಬರೆಯಿರಿ

ನಮ್ಮ ಊರಿನ ನಾಣಿಯ ಪರಿಚಯ ಸ್ವಲ್ಪ ನಿಮಗೆ ಮಾಡಿಕೊಡಬೇಕು. ನಾಣಿಯ ಪೂರ್ಣ ಹೆಸರು ನಾರಾಯಣಯ್ಯಂಗಾರ್. ಅವನಿಗೆ ವಯಸ್ಸು ಸುಮಾರು ನಲವತ್ತು ಇರಬಹುದು. ಇಪ್ಪತ್ತೆರಡನೆಯ ವಯಸ್ಸಿನಲ್ಲಿಯೇ ಮದುವೆಯಾಗಿ ವಿಧುರನಾದ. ಈಚೆಗೆ ಅನೇಕರು ಹೇಳಿದರೂ ಎರಡನೇ ಮದುವೆ ಮಾಡಿಕೊಳ್ಳಲಿಲ್ಲ. ಅವನಿಗೆ ಸ್ವಲ್ಪ ಪಿತ್ರಾರ್ಜಿತ ಆಸ್ತಿ ಇದೆ. ಅವನ ಅವಶ್ಯಕತೆಗಳು ಹೆಚ್ಚಾಗಿಲ್ಲವಾದುದರಿಂದ ಇದ್ದುದರಲ್ಲಿಯೇ ಸಾಲಗಾರನಾಗದೇ ಮಿತವ್ಯಯದಿಂದ ಸುಖಿಯಾಗಿದ್ದನು.

ಜೋಡಿದಾರರಿಗೂ ಅವನಿಗೂ ಬಹಳ ಸ್ನೇಹ. ಅವರೇ ಅವನನ್ನು ಮೊದಲು ನಾಣಿ ಎಂದು ಕರೆಯುವುದಕ್ಕೆ ಪ್ರಾರಂಭಿಸಿದರು. ಈಚೆಗೆ ಎಲ್ಲರೂ ಅವನನ್ನು ಹಾಗೆಯೇ ಕರೆಯುತ್ತಾರೆ. ನಾಣಿ ನಮ್ಮ ಊರಿಗೆ ಒಬ್ಬ ಬಾಲಾಚಾರ. ಯಾರಿಗೆ ಯಾವ ಕಾಲದಲ್ಲಾದರೂ ತನ್ನಿಂದಾಗಬಹುದಾದ ಸಹಾಯವನ್ನೂ ಮಾಡಲು ಸಿದ್ಧನಾಗಿರುತ್ತಾನೆ. ಜೋಡಿದಾರರಿಗೆ ಅವರ ಕೆಲಸಗಳಲೆಲ್ಲಾ ನಾಣಿ ಬಲಭುಜ. ನಾಣಿ ನಮ್ಮ ಊರಿನ ಇತರರಂತೆ ಬಹಳ ವಿನೋದ ಪ್ರಿಯ. ನಾವೆಲ್ಲರೂ ಅವನನ್ನು ಜವಾಬ್ದಾರಿಯಿಲ್ಲದ ಮನುಷ್ಯನೆಂದು ಕರೆಯುತ್ತೇವೆ. ರೈತರಿಗಂತೂ ಅವನನ್ನು ಕಂಡರೆ ಬಹಳ ವಿಶ್ವಾಸ. ಅವರು ಅವನ್ನು 'ಸರ್ವಜ್ಞ ನಾಣಪ್ಪ' ಎಂದು ಕರೆಯುತ್ತಾರೆ.